ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 12 ಸಂಚಿಕೆ : 3 ಪುಟ : 8 ಮಾರ್ಚ್-ಏಪ್ರಿಲ್ 2017



## ನಮ್ಮ ಮಗಳು ಜಗದ ಬೆಳಕು ನಮ್ಮ ದೇಹ ನಮ್ಮ ಹಕ್ಕು

*ಆತ್ಮೀಯ ಕಾರ್ಮಿಕರೇ,*

ಮತ್ತೊಂದು ಮಹಿಳಾ ದಿನಾಚರಣೆ ಬಂದಿದೆ. ಎಲ್ಲರಿಗೂ ಮಹಿಳಾ ದಿನಾಚರಣೆ ಶುಭಾಶಯಗಳು. ನೂರು ವರ್ಷಗಳ ಹಿಂದೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ನ್ಯಾಯಕ್ಕಾಗಿ ಬೀದಿಗಿಳಿದು ಹೋರಾಡಿದ, ಪ್ರಾಣವನ್ನು ತ್ಯಜಿಸಿದ ಸ್ಮರಣಾರ್ಥವಾಗಿ ಮಾರ್ಚ್ 8ನ್ನು 'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ'ಯೆಂದು ಗುರುತಿಸಲಾಗಿದೆ ಎಂದು ನಮ್ಮೆಲ್ಲರಿಗೂ ತಿಳಿದಿದೆ.

ವಿಪರ್ಯಾಸವೆಂದರೆ ಯಾವ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ತಮ್ಮ ಮೇಲಾಗುತ್ತಿದ್ದ ಶೋಷಣೆ ಅನ್ಯಾಯಗಳ ವಿರುದ್ಧ ಶತಕಗಳ ಹಿಂದೆ ಹೋರಾಡಿರೋ ಅದೇ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಇಂದಿಗೂ ಹಲವಾರು ವ್ಯವಸ್ಥೆಯಿಂದ ಶೋಷಣೆಗೊಳಗಾಗುತ್ತಿದ್ದಾರೆ. ವಿಧದಲ್ಲಿ ಕಳೆದ 12 ವರ್ಷಗಳಿಂದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಸಹಯೋಗದಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ವೈವಿದ್ಯಯಮ ರೀತಿಯಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ಕರ್ನಾಟಕದಲ್ಲಿ ಮಹತ್ವದ ಬೆಳವಣಿಗೆಯಾಗಿ ಈ ನಾಡಿನ ಮಹಿಳೆಯರೆಲ್ಲರೂ "ಸೋದರಿತ್ವ"ದ ನೆಲೆಯಲ್ಲಿ ಒಗ್ಗೂಡುತ್ತಿದ್ದಾರೆ. ಕಾರ್ಮಿಕರ, ಅಲ್ಪ ಸಂಖ್ಯಾತರ, ದಲಿತರ, ತುಳಿತಕ್ಕೊಳಗಾದವರ ಮೇಲಾಗುತ್ತಿರುವ ಹಲವಾರು ರೀತಿಯ ದೌರ್ಜನ್ಯ ಕೋಮುವಾದ, ಬಂಡವಾಳ ಶಾಹಿಯ ಕ್ರೌರ್ಯ, ನೈತಿಕ ಪೋಲೀಸ್ ಗಿರಿ, ಧರ್ಮ, ರಾಜಕೀಯಗಳ ಶೋಷಣೆಗಳನ್ನು ಒಕ್ಕೊರಲಿನಿಂದ ವಿರೋಧಿಸುವುದಲ್ಲದೇ ಮಹಿಳೆಯರಲ್ಲಿ ಪರಸ್ಪರ ಸೋದರಿ ಭಾವನೆ ಮೂಡಿದಾಗ ಮಾತ್ರ ನಾವೆಲ್ಲ ಒಂದಾಗಿ ನ್ಯಾಯ ಪಡೆದುಕೊಳ್ಳಬಹುದು ಎಂಬ ಮಹತ್ವದ ನಿರ್ಣಯ ಕೈಗೊಂಡು "ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ" ರಚನೆಯಾಗಿದೆ. ಎಲ್ಲಾ ಮಹಿಳಾ ಸಂಘಟನೆಗಳು ಜನಪರ ಸಂಘಟನೆಗಳು, ಸಮಾನ ಮನಸ್ಸುಗಳು ಒಂದುಗೂಡಿ ಈ ಒಕ್ಕೂಟದ ರಚನೆಯಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಹಿಳಾ ದಿನದ ಸಂದರ್ಭದಲ್ಲಿ ವಿವಿಧ ಮಹಿಳಾ ವಿಷಯದ ಬಗ್ಗೆ ವಿಚಾರ ಸಂಕಿರಣ, ಮೌನ ಪ್ರತಿಭಟನೆ, ಸಾರ್ವಜನಿಕ ರ‍್ಯಾಲಿಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ.




2013ರಲ್ಲಿ ಮಂಗಳೂರು, 2014ರಲ್ಲಿ ಮೈಸೂರು, 2015 ಬೆಂಗಳೂರು, 2016 ವಿಜಯಪುರದಲ್ಲಿ ಈ ಮಹಿಳಾ ಸಮಾವೇಶವನ್ನು ಯಶಸ್ವಿಯಾಗಿ ನಡೆಸಲಾಗಿದೆ. ಮಹಿಳಾ ಶೋಷಣೆಯ ವಿವಿಧ ಮುಖಗಳು, ಕಾರಣಗಳನ್ನು ಕುರಿತು ವಿಚಾರ ಸಂಕಿರಣ, ಮೌನ ಪ್ರತಿಭಟನೆ, ಸಾರ್ವಜನಿಕ ರ‍್ಯಾಲಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದಕ್ಕಿರುವ ಕಾರಣಗಳು, ಈ ಕಾರ್ಯಕ್ರಮಗಳು ಯುವ ಜನತೆಗೆ ತಲುಪಬೇಕೆಂದು ವಿಚಾರಣ ಸಂಕಿರಣಗಳನ್ನು ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ನಡೆಸ ಲಾಗುತ್ತಿದೆ. ಮಹಿಳಾ ಚಳುಚಳಿಯು ಸ್ತ್ರೀವಾದಿ ಸಿದ್ಧಾಂತದೊಂದಿಗೆ ಮುನ್ನಡೆಯಬೇಕೆಂಬ ಆಶಯವು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಯಶಸ್ಸಿನಲ್ಲಿ ನೆರವೇರುತ್ತಿದೆ. ಯುವ ಜನತೆಯು ಇದರಲ್ಲಿ ಹೆಚ್ಚು ಹೆಚ್ಚು ಉತ್ಸಾಹದಿಂದ ತೊಡಗಿಸಿ ಕೊಳ್ಳುತ್ತಿರುವುದು, ಮಹಿಳಾ ಚಳುವಳಿ ಕರ್ನಾಟಕದಲ್ಲಿ ಮತ್ತೊಮ್ಮೆ ಗಟ್ಟಿಯಾಗುತ್ತಿರುವುದರ ಸಂಕೇತ ಎನಿಸುತ್ತಿದೆ.

ಎಲ್ಲರೂ ಬನ್ನಿ ಕೊಪ್ಪಳದ ಮಹಿಳಾ ದಿನಾಚರಣೆಯ ಸಮಾವೇಶದಲ್ಲಿ ಪಾಲ್ಗೊಳ್ಳೋಣ. ಸೋದರಿಯರಾದ ವಾಣಿ ಪೆರಿಯೋಡಿ, ಜ್ಯೋತಿ, ಶಿವಲೀಲಾ ಮತ್ತು ಕೊಪ್ಪಳದ ಇನ್ನೂ ಹಲವಾರು ಸೋದರ ಸೋದರಿಯರ ಸಮಾವೇಶದ ಸಂಪೂರ್ಣ ಹೊಣೆ ಹೊತ್ತು ಅದರ ಯಶಸ್ಸಿಗೆ ದುಡಿಯುತ್ತಿದ್ದಾರೆ. ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಮತ್ತು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಸಂಘಟನೆಯು ಕಳೆದವರ್ಷಗಳಿಂದಲೂ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಜೊತೆಗೆ ಸಕ್ರಿಯವಾಗಿ ಭಾಗವಹಿಸುತ್ತ ಹಲವಾರು ಕಾರ್ಯಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರವಾಗಿದೆ. ❐

Scanned with OKEN Scanner




**ಕೊ**ಪ್ಪಳ ಸಮಾವೇಶದ ಹೋಣೆ ಹೊತ್ತವರಲ್ಲಿ ಒಬ್ಬರಾದ ಜ್ಯೋತಿಯವರು ಸಮಾವೇಶದ ಸಿದ್ಧತೆ ಬಗ್ಗೆ ಸೂಜಿ-ದಾರದೊಂದಿಗೆ ಹಂಚಿಕೊಂಡಿದ್ದಾರೆ.

ಈ ಮೇಲಿನ ಘೋಷವಾಕ್ಯದೊಂದಿಗೆ ಮಹಿಳಾ ಮೆರವಣಿಗೆಗೆ ತಯಾರಿ ಅದೆಷ್ಟು ಸಂಭ್ರಮದಿಂದ ಸಾಗುತ್ತಿದೆ ಎಂದರೆ ಮನಸ್ಸು ತುಂಬಿ ಉತ್ಸಾಹದಿಂದ ಕೆಲಸ ಮಾಡಲು ಹೊರಟಿದ್ದೇವೆ. ಕೊಪ್ಪಳ ಜಿಲ್ಲೆಯ ಮಹಿಳಾಪರ ಸಮಾನ ಮನಸ್ಕರೆಲ್ಲರೂ ಇದಕ್ಕೆ ಕೈ ಜೋಡಿಸಿ ಈ ಸಮಾವೇಶವನ್ನು ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಬೇಕೆಂದು ಹೊರಟಿದ್ದೇವೆ. ನಮ್ಮ ಕೊಪ್ಪಳ ಮಂದಿಗೆ ಖುಷಿಯೋ ಖುಷಿ ಏನು ಮಾಡಬೇಕೋ, ಏನು ಬಿಡಬೇಕೋ ಗೊತ್ತಾಗ್ತಿಲ್ಲ. ಕೊನೆಯ ಸಿದ್ಧತಾ ಸಭೆಯಲ್ಲಿ ಕೆಲಸಗಳ ವಿವರ ಜವಾಬ್ದಾರಿಗಳ ಹಂಚಿಕೆ ಮಾಡುವುದರ ಮೂಲಕ ಕೆಲಸ ಪ್ರಾರಂಭವಾಯಿತು. ಕೆಲಸಗಳನ್ನು ಮುಂದುವರೆಸುವುದಕ್ಕೆ ಒಂದಷ್ಟು ಸಮಿತಿಗಳನ್ನು ಮಾಡಿಕೊಂಡೆವು.

ಸಮಾವೇಶದಿಂದ ಸಮಾವೇಶಕ್ಕೆ ಚಿಕ್ಕ ಪುಟ್ಟ ಬೆಳವಣಿಗೆಗಳನ್ನು ಮಾಡಿಕೊಂಡು ಬಂದಿದ್ದೇವೆ. ಈ ಹಿಂದೆ ಎರಡು ವರ್ಷಗಳಿಂದ ಮಾಡಿದಂತೆ ಕರ ವಸ್ತ್ರ ತಯಾರಿಸಿ, ಮಾರಾಟಕ್ಕೆ ಬಳಸುವುದು ಇಲ್ಲಿ ಸಾಧ್ಯವಾಗಿದೆ. ಇಲ್ಲಿ ಕರ ವಸ್ತ್ರ ತಯಾರಿಯಲ್ಲಿ ವಿವಿಧ ಸಂಘಟನೆಯವರು ಸಹಕಾರ ನೀಡಿದ್ದಾರೆ ಮತ್ತು ಈಗಾಗಲೇ ಮಾರಾಟವೂ ಶುರುವಾಗಿದೆ. ಯುವಕರು, ಯುವತಿಯರು ಜೊತೆಗೇರಿ ಒಂದಷ್ಟು ಹಾಡು, ಕತೆ, ಕವನ, ಕಿರು ನಾಟಕ, ಕ್ವಿಜ್ ತಯಾರು ಮಾಡಿಕೊಂಡೆವು. ಕೊಪ್ಪಳದಲ್ಲಿ ಹೊಸತಾಗಿ ಮಾಹಿತಿ ಪತ್ರಗಳನ್ನು ತಯಾರಿಸಿ, ಹಂಚಲು ಶುರು ಮಾಡಿದ್ದೇವೆ. ಕೊಪ್ಪಳದ ಗೋಡೆಗಳಲ್ಲಿ ಸಮಾವೇಶದ ಘೋಷವಾಕ್ಯಗಳು ಬಣ್ಣ ತಾಳುತ್ತಿವೆ. ಇದು ನಮಗೆ ಇನ್ನೊಂದು ಸಂಭ್ರಮ. ಗೋಡೆ ಬರಹದ ಬಗ್ಗೆ ನಿರ್ಧಾರ ದೊಡ್ಡ ಸಭೆಯಲ್ಲೇ ನಿರ್ಧಾರವಾಗಿತ್ತು. ಬೆಳ್ಳಂಬೆಳಗ್ಗೆ ಹೋಗಿ ಗೋಡೆ ಮೇಲೆ ಇದರ ಬಗ್ಗೆ ಬರೆಯುವುದೇ ಒಂದು ಖುಷಿ.ಕೊಪ್ಪಳದ ಜನಕ್ಕೆ ಅತ್ಯಂತ ಅಪರೂಪದ ನೋಟ.ಏನೇ ಇರಲಿ ಜನರ ನಡುವೆ ಸುದ್ದಿಯಂತು ಹಬ್ಬುತ್ತಾ ಇದೆ.

ಸಮಾವೇಶಕ್ಕೆ ಚಾಲನೆ ನೀಡಲು ಕವಿತಾ ಕೃಷ್ಣನ್‌ರವರು ಬರುತ್ತಿದ್ದಾರೆ. ನೀವು ಬರುವುದಕ್ಕೆ ತಯಾರು ಮಾಡಿಕೊಳ್ಳಿ.

■ಜ್ಯೋತಿ ಹಿಟ್ನಾಳ್

## ಕಾರ್ಮಿಕರ ಹಣದಲ್ಲಿ ನಡೆಯುತ್ತಿರುವ ಇ.ಎಸ್.ಐ ಆಸ್ಪತ್ರೆಯಲ್ಲಿ ಕಾರ್ಮಿಕರಿಗೇ ಅನ್ಯಾಯ!!!

ದಿನಾಂಕ 27.02.2017ರಂದು GATWU ಸದಸ್ಯರಾದ ಶ್ರೀ ಕೆ.ಆರ್. ರವಿರವರು ರಾಜಾಜಿನಗರ ಇ.ಎಸ್.ಐ ಆಸ್ಪತ್ರೆಗೆ ತಮ್ಮ ಅನಾರೋಗ್ಯ ಪೀಡಿತ ತಂದೆಯವರನ್ನು ಕರೆದುಕೊಂಡು ಹೋದಾಗ ಅಲ್ಲಿ ರೋಗಿಗಳಿಗೆ ಗಾಲಿ ಕುರ್ಚಿಗಳು ಮತ್ತು ಸ್ಟ್ರೆಚರ್‌ಗಳು ಇಲ್ಲದೆ ತೊಂದರೆಗೊಳಗಾದದ್ದರ ಬಗ್ಗೆ ಯೂನಿಯನ್‌ಗೆ ದೂರು ನೀಡಿರುತ್ತಾರೆ. ಆ ದಿನ ಅವರ ತಂದೆಯನ್ನು ಅಂಕಲಾಜಿ ವಿಭಾಗದಿಂದ ರಕ್ತಪರೀಕ್ಷೆ ಮತ್ತು ಇತರ ಚಿಕಿತ್ಸೆಗಾಗಿ ಕರೆದೊಯ್ಯಲು ಗಾಲಿಕುರ್ಚಿಯ ಸಹಾಯವನ್ನು ಕೇಳಿದಾಗ ಅಲ್ಲಿನ ಸಿಬ್ಬಂದಿ "ಈ ವಿಭಾಗದಲ್ಲಿ ನಿಮಗೆ ಸಹಾಯ ಮಾಡುವವರು ಯಾರೂ ಇಲ್ಲ, ಗಾಲಿಕುರ್ಚಿ ಒಂದೇ ಇರುವುದು. ನಿಮಗೆ ಬೇಕಾದರೆ ಯಾವುದಾದರು ಮುಖ್ಯ ದಾಖಲೆಯನ್ನು ಠೇವಣಿ ಇಟ್ಟು ತೆಗೆದುಕೊಂಡು ಹೋಗಿ ನಂತರ ಗಾಲಿಕುರ್ಚಿಯನ್ನು ಹಿಂದಿರುಗಿಸಿ ನಿಮ್ಮ ದಾಖಲೆಯನ್ನು ತೆಗೆದುಕೊಂಡು ಹೋಗಿ" ಎಂದು ಒರಟಾಗಿ ಉತ್ತರಿಸಿರುತ್ತಾರೆ. ರವಿ ಅವರು ಇದನ್ನು ಪ್ರಶ್ನಿಸಿದಾಗ ನಮ್ಮಲ್ಲಿ ಸಾಕಷ್ಟು ಗಾಲಿಕುರ್ಚಿಗಳು ಇಲ್ಲ ಮತ್ತು ಸಿಬ್ಬಂದಿಯೂ ಇಲ್ಲ" ಎಂದು ಬೇಜವಾಬ್ದಾರಿಯಿಂದ ನಡೆದುಕೊಂಡಿರುತ್ತಾರೆ. ಇದೇ ಸಂದರ್ಭದಲ್ಲಿ ಆಂಬುಲೆನ್ಸ್ ಒಂದರಲ್ಲಿ ಬಂದ ರೋಗಿಯೊಬ್ಬರು, ಗಾಲಿ ಕುರ್ಚಿ ಇಲ್ಲದೆ ಸುಮಾರು 20–25 ನಿಮಿಷ ಆಂಬುಲೆನ್ಸ್‌ನಲ್ಲಿಯೇ ಇದ್ದರು. ನಂತರ ಒಂದು ಚಕ್ರಕ್ಕೆ ರಬ್ಬರ್ ಟಯರ್ ಇಲ್ಲದ ಗಾಲಿಕುರ್ಚಿಯನ್ನೇ ತಂದು ರೋಗಿಯನ್ನು ಕರೆದುಕೊಂಡು ಹೋಗಲಾಯಿತು.

ಕಾರ್ಮಿಕರ ಮತ್ತು ಅವರ ಕುಟುಂಬದವರ ಆರೋಗ್ಯ ರಕ್ಷಣೆ ಮತ್ತು ಸುರಕ್ಷತೆಗಾಗಿ ರೂಪುಗೊಂಡ ಇ.ಎಸ್.ಐ ಸಂಸ್ಥೆಯು ಅತ್ಯುತ್ತಮ ಸಾಮಾಜಿಕ ಸುರಕ್ಷಾ ಯೋಜನೆಯಾಗಿದ್ದು, ಕಾರ್ಮಿಕರ ಆಶಾಕಿರಣವಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯಾವುದೇ ಅನುದಾನವನ್ನು ಪಡೆಯದೆ ಕಾರ್ಮಿಕರ ವಂತಿಗೆಯಿಂದಲೇ ಸ್ವತಂತ್ರವಾಗಿ ಕಾರ್ಮಿಕರಿಂದ ಕಾರ್ಮಿಕರಿಗಾಗಿ ಮತ್ತು ಕಾರ್ಮಿಕರಿಗೋಸ್ಕರ ನಡೆಯುತ್ತಿರುವ ಸಂಸ್ಥೆಯಾಗಿದ್ದು ನಿಗಮದ ಆದ್ಯತೆಯು ಕಾರ್ಮಿಕರ ಉತ್ತಮ ಆರೋಗ್ಯ ಸೇವೆಯೇ ಆಗಬೇಕಿದೆ. ಖರ್ಚಾಗಿ ಉಳಿದ ಇ.ಎಸ್.ಐ ವಂತಿಗೆಯ ಸಾವಿರಾರು ಕೋಟಿ ಹಣವನ್ನು ಆಸ್ಪತ್ರೆಗಳ ಮೂಲ ಸೌಲಭ್ಯಗಳನ್ನು ಉತ್ತಮಗೊಳಿಸಲು ಬಳಸದೆ, ನಿಗಮವು ಬೇರೆ ಬೇರೆ ಕಡೆ ಹೂಡಿಕೆ ಮಾಡುವುದರಿಂದ ನಿಜವಾಗಿ ಕಾರ್ಮಿಕರಿಗೆ ಯಾವ ಉಪಯೋಗವೂ ಇಲ್ಲ. ಜೊತೆಗೆ ಆಸ್ಪತ್ರೆಗಳಲ್ಲಿ ಮೂಲ ಸೌಕರ್ಯ ಇಲ್ಲವೆಂದು ಹೇಳಿ, ದೊಡ್ಡ ದೊಡ್ಡ ಆಸ್ಪತ್ರೆಗೆ ಟೈ ಅಪ್ ಮಾಡಿಕೊಳ್ಳುವ ಮೂಲಕ ವ್ಯವಸ್ಥಿತವಾಗಿ ಖಾಸಗೀಕರಣದತ್ತ ಮುಖ ಮಾಡುತ್ತಿರುವುದು ಆತಂಕಕಾರಿಯಾಗಿದೆ.



ತಕ್ಷಣವೇ ಇ.ಎಸ್.ಐ. ಆಸ್ಪತ್ರೆಯಲ್ಲಿ ಕಾರ್ಮಿಕರಿಗಾಗುತ್ತಿರುವ ತೊಂದರೆಯನ್ನು ತಪ್ಪಿಸಿ ಅಗತ್ಯ ಸಿಬ್ಬಂದಿ ಮತ್ತು ಪರಿಹಾರಗಳನ್ನು ಒದಗಿಸಬೇಕೆಂದು ಯೂನಿಯನ್ ಆಗ್ರಹಿಸುತ್ತದೆ. ಈ ಸಂಬಂಧ ಈಗಾಗಲೇ ಇ.ಎಸ್.ಐ. ನಿರ್ದೇಶಕರು ವೈದ್ಯಕೀಯಾ ಸೂಪರ್‌ಡೆಂಟ್ ಮತ್ತು ಡೀನವರಿಗೆ ದೂರು ನೀಡಲಾಗಿದೆ.

ಸಂಗಾತಿಗಳೇ, ನಿಮಗೂ ಈ ರೀತಿಯ ಅನುಭವವಾಗಿದ್ದರೆ ಅದನ್ನು GATWU ಗಮನಕ್ಕೆ ತಂದಲ್ಲಿ, ಅದರ ಬಗ್ಗೆ ಸಂಬಂಧಪಟ್ಟ ಉನ್ನತ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹಾರವಾಗುವ ನಿಟ್ಟಿನಲ್ಲಿ ಯತ್ನಿಸಲಾಗುವುದು. ❑



Scanned with OKEN Scanner

## 2017– 2018 ರ ಸಾಲಿನ ತುಟ್ಟಿಭ್ಯತ್ಯೆ (ಡಿ.ಎ) ಹೆಚ್ಚಳ

ಸಂಗಾತಿಗಳೇ ಗಮನಿಸಿ!!

ಕಾರ್ಮಿಕ ಇಲಾಖೆಯು, 2017–2018 ರ ವಾರ್ಷಿಕ ತುಟ್ಟಿಭತ್ಯೆಯನ್ನು (ಡಿ.ಎ) ಯನ್ನು ಘೋಷಿಸಿದ್ದು, ದಿನಕ್ಕೆ ರೂ.14.12 ಹೆಚ್ಚಾಗಿದೆ. ಅಂದರೆ ತುಟ್ಟಿಭತ್ಯೆಯು ತಿಂಗಳಿಗೆ ರೂ. 367.20 ರಷ್ಟು ಹೆಚ್ಚಾಗಿದೆ. ದಿನಾಂಕ 01.04.2017 ರಿಂದ ಜಾರಿಯಾಗುವಂತೆ, ಕಾರ್ಮಿಕರೆಲ್ಲರಿಗೂ 2017 ರ ಮೇ ತಿಂಗಳ ವೇತನದೊಂದಿಗೆ ರೂ. 367.20 ನ್ನು ಸೇರಿಸಿ ಕೊಡಬೇಕು. (ಹೆಚ್ಚಳವಾದ ಅಂಶಗಳು: 306 ಅಂಶಗಳು)

## ಗಾರ್ಮೆಂಟ್ಸ್ ಕಾರ್ಮಿಕರ ಪ್ರತಿಭಟನೆ ಕುರಿತ ಸತ್ಯ ಶೋಧನಾ ವರದಿ

2016 ಏಪ್ರಿಲ್ 18,19 ಗಾರ್ಮೆಂಟ್ಸ್ ಕಾರ್ಮಿಕರ ಇತಿಹಾಸದಲ್ಲೇ ಒಂದು ಮಹತ್ವದ ದಿನ. ಇದ್ದಕ್ಕಿದಂತೆ ಮದ್ದೂರು, ಬೆಂಗಳೂರಿನ ಬೊಮ್ಮನಹಳ್ಳಿ, ಮೈಸೂರು ರಸ್ತೆ ಹಾಗೂ ಪೀಣ್ಯ ಪ್ರದೇಶದಲ್ಲಿ ಸಾವಿರಾರು ಸಂಖ್ಯೆಯ್ಲಲಿ ಮಹಿಳಾ ಕಾರ್ಮಿಕರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ನ್ಯಾಯ ಬೇಕಂದು ಬೀದಿಗಿಳಿದರು. ಬೆಂಗಳೂರು ಅಕ್ಷರಶಃ ಸ್ತಬ್ಧವಾಗಿತ್ತು. ಇದು ಇದ್ದಕ್ಕಿದ್ದಂತೆ ಆದ ಮಿಂಚಿನ ಪ್ರತಿಭಟನೆ ಎಂದೇ ಎಲ್ಲರೂ ಹೇಳಿದರು. ಆದರೆ ಅದರ ಹಿಂದೆ ಹಲವಾರು ವರ್ಷದಿಂದ ಅದುಮಿಟ್ಟ ಆಕ್ರೋಶವಿದೆ. ಅದರಂತೆ ಸಂಸ್ಥೆಗೆ ಈ ಘಟನೆಯ ಬಗ್ಗೆ ಸತ್ಯ ಶೋಧನಾ ವರದಿಯನ್ನು ಹೊರತರಬೇಕೆಂದು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ (GATWU) ಕೇಳಿಕೊಂಡಿತು. ಅದರಂತೆ PUCL ಸಂಸ್ಥೆಯು ಈ ಹಿನ್ನಲೆಯಲ್ಲಿ ಹೋರಾಟವನ್ನು ಕುರಿತು "ಪೀಪಲ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟಿಸ್ (PUCL) ಸಂಸ್ಥೆಯು ಸತ್ಯ ಶೋಧನಾ ತಂಡರಚಿಸಿ ವರದಿಯೊಂದನ್ನು ಅತ್ಯಂತ ವಿಸ್ತೃತವಾದ ಈ ವರದಿಯನ್ನು ತಂದಿದೆ. ಸೂಜಿದಾರ ಸಂಚಿಕೆಯಿಂದ ಪ್ರತಿ ಸಂಚಿಕೆಯಲ್ಲೂ ಹಂತಹಂತವಾಗಿ ಪ್ರಕಟಿಸುತ್ತಿದ್ದೇವೆ. ಪ್ರಕಟಿಸಲು ಅನುಮತಿ ನೀಡಿದ (PUCL) ಗೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ (GAWTU) ಧನ್ಯವಾದಗಳನ್ನು ಅರ್ಪಿಸುತ್ತಿದೆ.

## "ಬಟ್ಟೆಯ ಜಾಡುಹಿಡಿದು" – ಗಾರ್ಮೆಂಟ್ಸ್ ಉದ್ಯಮದ ಹಿನ್ನೆಲೆ

ತಂಪಾದ ಮತ್ತು ಒಣ ಹವಾಮಾನವನ್ನು ಹೊಂದಿರುವ ಬೆಂಗಳೂರು, ಟಿಪ್ಪು ಸುಲ್ತಾನನ ಕಾಲದಿಂದಲೂ ಗಾರ್ಮೆಂಟ್ಸ್ ಉತ್ಪಾದನೆಗೆ ಐತಿಹಾಸಿಕ ಕೇಂದ್ರವಾಗಿದೆ. 1940ರಲ್ಲಿ ಮೊತ್ತಮೊದಲು ವಿಠಲ್‌ರಾವ್ ಎಂಬುವವರಿಂದ ಗಾರ್ಮೆಂಟ್ಸ್ ಉತ್ಪಾದನಾ ಘಟಕವು ಸ್ಥಾಪನೆಯಾಯಿತು. 1 ಗಾರ್ಮೆಂಟ್ಸ್ ಉದ್ಯಮವು ಹೆಚ್ಚು ಕಾರ್ಮಿಕರನ್ನು ಬೇಡುವ ಉದ್ಯಮ, ಈ ಕಾರಣಕ್ಕಾಗಿಯೇ ಕಡಿಮೆ ಕೂಲಿ, ಹೆಚ್ಚು ಕಾರ್ಮಿಕ ಸಮುದಾಯಗಳನ್ನು ಹೊಂದಿದ ಅಭಿವೃದ್ಧಿಶೀಲ ರಾಷ್ಟ್ರಗಳು, ಗಾರ್ಮೆಂಟ್ಸ್ ಉದ್ಯಮದ ವಿಷಯದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಮೇಲುಗೈ ಸಾಧಿಸಲು ಕಾರಣವಾದವು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತಮ್ಮ ದೇಶೀಯ ಕೈಗಾರಿಕೆಗಳನ್ನು ರಕ್ಷಿಸುವ ಸಲುವಾಗಿ 1974ರಿಂದ 2004ರ ಅವಧಿಯವರೆಗೂ ಮಾಡಿಕೊಂಡ ಒಪ್ಪಂದವೇ 'ಮಲ್ಟಿಫೈಬರ್ ಅರೇಂಜ್‌ಮೆಂಟ್'. ಈ ಒಪ್ಪಂದವು ಅಭಿವೃದ್ಧಿಶೀಲ ರಾಷ್ಟ್ರಗಳಿಂದ ಸಿದ್ಧ ಉಡುಪುಗಳನ್ನು ಆಮದು ಮಾಡಿಕೊಳ್ಳಲು ನಿಯಂತ್ರಣ ಹೇರಿತ್ತು. ಈ ಸಂದರ್ಭದಲ್ಲಿ ಭಾರತದ ಗಾರ್ಮೆಂಟ್ಸ್ ಉದ್ಯಮವು ಸಂಘಟಿತ ವಲಯ ದೊಳಗೆ ಪ್ರಾಥಮಿಕ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿತ್ತು. 1986 ರಿಂದ 1994ರ ವರೆಗೆ ಜಾರಿಯಲ್ಲಿದ್ದ 'ಉರುಗ್ವೇ ರೌಂಡ್ ಆಫ್ ಮಲ್ಟಿಲ್ಯಾಟರಲ್ ಟ್ರೇಡ್ ನೆಗೋಶಿಯೇನ್ಸ್' ಒಪ್ಪಂದವು ರದ್ದಾದ ನಂತರ, ಈ ವ್ಯಾಪಾರವು ವಿಶ್ವ ವ್ಯಾಪಾರ ಸಂಸ್ಥೆ (WTO)ಯ ಟೆಕ್ಸ್‌ಟೈಲ್ ಮತ್ತು ಕ್ಲಾತಿಂಗ್ ಒಪ್ಪಂದದ ನಿಯಂತ್ರಣದಲ್ಲಿ ನಡೆಯತೊಡಗಿತು. ಹಾಗಾಗಿ ಮುಂದಿನ ಒಂದು ದಶಕದ ಅಂದರೆ 1995 ರಿಂದ 2004 ರ ಅವಧಿಯಲ್ಲಿ ಈ ವ್ಯಾಪಾರವು ಮುಕ್ತ ಮಾರುಕಟ್ಟೆಯ ಕ್ರಮಗಳನ್ನು ಅಳವಡಿಸಿ ಕೊಂಡಿತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ, ಈಗ ತಾನೇ ಹೊಸ ಆರ್ಥಿಕ ನೀತಿಗಳನ್ನು ಅಳವಡಿಸಿಕೊಳ್ಳುತ್ತಿದ್ದ ರಾಷ್ಟ್ರಗಳಿಗೆ, ಉತ್ಪಾದನಾ ಕೇಂದ್ರಗಳು ಸ್ಥಳಾಂತರಗೊಂಡವು. ಅಂತರರಾಷ್ಟ್ರೀಯ ಗಾರ್ಮೆಂಟ್ಸ್ ಉದ್ಯಮದ ಮಟ್ಟದಲ್ಲಿ ಚೀನಾವನ್ನೂ ಸೇರಿ ಭಾರತವು ಪ್ರಮುಖ ಪಾತ್ರ ವಹಿಸಿದವು. 1980ರ ದಶಕದಲ್ಲಿ ಗಾರ್ಮೆಂಟ್ಸ್ ಉದ್ಯಮವು ಸಿದ್ಧ ಉಡುಪುಗಳ ತಯಾರಿಕೆಯಲ್ಲಿ ತನ್ನ ಗಮನ ಕೇಂದ್ರೀಕರಿಸಲು ಪ್ರಾರಂಭಿಸಿತು.

ಇದರ ಜೊತೆ ಜೊತೆಗೇ, ಅನೌಪಚಾರಿಕ ಕಾರ್ಮಿಕ ಶಕ್ತಿಯು ಹೆಚ್ಚಾಯಿತು, ಆ ನಂತರ ಮಹಿಳೆಯರು ಕಾರ್ಮಿಕರಾಗಿ ಉದ್ಯೋಗಸ್ಥರಾದರು. ಪರಿಣಾಮವಾಗಿ ಮಹಿಳೆಯರೇ ಗಾರ್ಮೆಂಟ್ಸ್ ಉದ್ಯಮದ ಬಹುತೇಕ ಕಾರ್ಮಿಕ ಶಕ್ತಿಯಾಗಿದ್ದಾರೆ. ಇದೇ ಸಮಯದಲ್ಲಿ ಬಂಡವಾಳ ಹೂಡಿಕೆಯ ಬೇಡಿಕೆ ಹೆಚ್ಚಾದುದರಿಂದ ಕಾರ್ಮಿಕ ಹಕ್ಕುಗಳ ಜಾರಿಯಲ್ಲಿಯೂ ಇಳಿಕೆಯಾಗ ತೊಡಗಿತ್ತು.

2000ದ ಮೊದಲಿನ ವರ್ಷಗಳಲ್ಲಿ ಮಾಹಿತಿ ತಂತ್ರಜ್ಞಾನದ ಅಲೆಯು ಪ್ರಾರಂಭವಾಗಿ, 2000 ನಂತರದ ಮಧ್ಯ ಭಾಗದಲ್ಲಿ ಕಾರ್ಮಿಕ ಶಕ್ತಿಯ ಮಾರುಕಟ್ಟೆ ಸ್ಥಿರೀಕರಣಗೊಂಡಿತು. ಬೆಂಗಳೂರಿಗೆ ವಿದ್ಯಾವಂತ ಕಾರ್ಮಿಕರ (ವೈಟ್ ಕಾಲರ್ ವರ್ಕರ್ಸ್) ವಲಸೆ ಹೆಚ್ಚಾದುದದ್ದರಿಂದ ಬೆಂಗಳೂರಿನ ಭೂಮಿಯ ಬೆಲೆ ಏರತೊಡಗಿತು. ಈ ಕಾರಣಕ್ಕಾಗಿಯೇ ಹಲವಾರು ಉದ್ಯಮಗಳು ಬೆಂಗಳೂರಿನ ಸುತ್ತಮುತ್ತಲ ಹೊರವಲಯದ ಪ್ರದೇಶಗಳಿಗೆ ಸ್ಥಳಾಂತರವಾಗತೊಡಗಿತು.

2000ದ ಕಡೆಯ ವರ್ಷಗಳಲ್ಲೂ ಸಹ ಈ ವರ್ತನೆ ಹೀಗೇ ಮುಂದುವರೆಯಿತು. ಹೆಚ್ಚಾದ ಕಾರ್ಮಿಕರ ದರಗಳು, ಮಧ್ಯಮವರ್ಗದ ಖರ್ಚುವೆಚ್ಚ, ಮತ್ತು ರಿಯಲ್ ಎಸ್ಟೇಟ್ ದರ ಈ ಎಲ್ಲ ಅಂಶಗಳೂ ಸಹ ಉದ್ಯಮಗಳು ಬೆಂಗಳೂರಿನಿಂದ ಸುತ್ತಮುತ್ತಲ ಪ್ರದೇಶಗಳಿಗೆ ಹೋಗುವ ಪ್ರಕ್ರಿಯೆಯನ್ನು ಮುಂದುವರೆಸಲು ಕಾರಣವಾದವು. ಐಟಿ ಉದ್ಯಮದ ಅಲೆಯ ಪರಿಣಾಮವಾಗಿ ಮಧ್ಯಮವರ್ಗದ ಖರ್ಚುವೆಚ್ಚ ಹೆಚ್ಚಾಯಿತು ಮತ್ತು ಬೆಂಗಳೂರಿನಲ್ಲಿದ್ದ ದೊಡ್ಡ ದೊಡ್ಡ ಟೆಕ್ಸ್‌ಟೈಲ್ ಮಿಲ್‌ಗಳು ನಗರದಿಂದ ಹೊರಗೆ ಸ್ಥಳಾಂತರವಾದವು ಮತ್ತು ಈ ಜಾಗದಲ್ಲಿ ಭಾರೀ ಶಾಪಿಂಗ್ ಮಾಲ್‌ಗಳು, ರೆಸ್ಟೊರೆಂಟ್‌ಗಳು, ಆಸ್ಪತ್ರೆಗಳು, ಹೊಟೆಲ್‌ಗಳು ಪ್ರಾರಂಭವಾದವು. ಉದಾಹರಣೆಗೆ ಮಿನರ್ವ ಮಿಲ್, ರಾಜಮಿಲ್ ಮತ್ತು ಬಿನ್ನಿಮಿಲ್‌ಗಳು ಬೆಂಗಳೂರಿನ ಕೆಲವು ಹಳೆಯ ಮಿಲ್‌ಗಳು. ಇವುಗಳು ಸುಮಾರು 8000 ಕಾರ್ಮಿಕರಿಗೆ ಉದ್ಯೋಗ ನೀಡಿತ್ತು ಮತ್ತು ಈ ಕಾರ್ಮಿಕರೆಲ್ಲರೂ ವಸಾಹತು ಕಾಲದಿಂದಲೂ ನಡೆದ ರಾಜಕೀಯ ಪ್ರಕ್ರಿಯೆಗಳ ಬಗ್ಗೆ ಪ್ರಜ್ಞೆಯುಳ್ಳ ಕಾರ್ಮಿಕರಾಗಿದ್ದರು. ಆದರೆ 2000ರ ಮಧ್ಯ ಭಾಗದಲ್ಲಿ ಈ ಮಿಲ್‌ಗಳು ಮುಚ್ಚಲ್ಪಟ್ಟವು.

*(ಮುಂದುವರೆಯುತ್ತದೆ)*



Scanned with OKEN Scanner

# ಮಹಿಳಾ ದೌರ್ಜನ್ಯ: ವಿವಿಧ ಆಯಾಮಗಳು

ಮಹಿಳಾ ಸಂಘಟನೆಯಾಗಿ ಗಾರ್ಮೆಂಟ್ಸ್ ಕಾರ್ಮಿಕರ ಕೆಲಸದ ಸ್ಥಳ ಹಾಗೂ ಅವರ ವಾಸದ ಸ್ಥಳದಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಹಲವಾರು ಲಿಂಗಾಧಾರಿತ ದೌರ್ಜನ್ಯದ ಘಟನೆಗಳ ಬಗ್ಗೆ ನಿರಂತರವಾಗಿ ಕೇಳುತ್ತಿದ್ದೇವೆ. ಕಾರ್ಖಾನೆಯಲ್ಲಿ ನಡೆಯುವ ಲೈಂಗಿಕ ಕಿರುಕುಳದ ವಿರುದ್ಧ ಹಾಗೂ ಕುಟುಂಬದಲ್ಲಿ ನಡೆಯುವ ಕೌಟುಂಬಿಕ ದೌರ್ಜನ್ಯಗಳ ವಿರುದ್ಧ 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ'ಯು ತನ್ನ ಮಿತಿಯ ಒಳಗೇ ಹಲವಾರು ಕಾರ್ಯಚಟುವಟಿಕೆ ನಡೆಸುತ್ತಿದೆ. ಅದರಲ್ಲೂ ಸಹ ಮಹಿಳಾ ಕಾರ್ಮಿಕರ ಕೌಟುಂಬಿಕ ಸಮಸ್ಯೆಗಳಿಗೆ ಉಚಿತ ನೆರವು ಮತ್ತು ಸಲಹೆಗಳನ್ನು ನೀಡಲಾಗುತ್ತಿದೆ. ದೌರ್ಜನ್ಯವಾದ ಸಂದರ್ಭದಲ್ಲಿ ಅದರ ನಿರ್ವಹಣೆಯ ಜೊತೆಗೆ, ಪೊಲೀಸರಿಂದ ಹಿಡಿದು ಮನೆ ಮಾಲೀಕರವರೆಗೂ "ಇದು ಸಹಜ" ಎಂಬ ಸಮಾಜದ ಒಪ್ಪಿತ ಧೋರಣೆಯನ್ನೂ ಸಹ ನಿರ್ವಹಿಸುವ ಅನಿವಾರ್ಯತೆ ಸಂಘಟನೆಗೆ ಇದೆ.

ಇನ್ನೊಂದು ರೀತಿಯ ದೌರ್ಜನ್ಯವನ್ನು ಅನುಭವಿಸುತ್ತಿದ್ದಾರೆ.

ಒಂದು ವೇಳೆ, ಮಹಿಳೆ ದೌರ್ಜನ್ಯ ಸಹಿಸದೆ ಧೈರ್ಯ ತಂದು ಕೊಂಡು ಗಂಡನ ವಿರುದ್ಧ ದೂರು ನೀಡಲು ಮುಂದೆ ಬಂದರೆ ಪೋಲೀಸ್ ಠಾಣೆಯಲ್ಲಿ ನ್ಯಾಯದ ಬದಲು ಅವಳ ಧೈರ್ಯ ಕುಂದಿಸುವ ಹೇಳಿಕೆಗಳು ಎದುರಾಗುತ್ತವೆ. "ಇಷ್ಟು ವರ್ಷಗಳು ಅವನೊಂದಿಗೆ ಇದ್ದೆ ಈಗ ಏನೂ ದಿಡೀರ್ ಎಂದು ಕಷ್ಟ, ಸಮಸ್ಯೆ? ರಾತ್ರಿ ಅವನೊಂದಿಗೆ ಸಹಕರಿಸಿದರೆ ಬೆಳಗ್ಗೆ ಎಲ್ಲಾ ಸರಿ ಹೋಗುತ್ತೆ, ಆಯ್ತಾ" ಎಂದು ವ್ಯಂಗ್ಯ ವಾಡುತ್ತಾರೆ. ಪೊಲೀಸರ ಈ ಕ್ರಮವನ್ನು ಒಮ್ಮೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕ ಮುನ್ನಡೆ ಸಂಘಟನೆಯ ಕಾರ್ಯಕರ್ತರು ಪ್ರಶ್ನಿಸಿದ್ದಕ್ಕೆ, "ನೀವು ಮಧ್ಯೆ ಬರಬೇಡಿ, ಇದು ಕುಟುಂಬ ಸಮಸ್ಯೆ, ಗಂಡಹೆಂಡಿರ ಮಧ್ಯೆ ಬಗೆಹರಿಯುತ್ತದೆ, ಅವರ ವೈಯಕ್ತಿಕ ಸಮಸ್ಯೆಗಳಲ್ಲಿ ನೀವು ತಲೆ ಹಾಕಬೇಡಿ" ಎನ್ನುತ್ತಾರೆ.ದೂರು ತೆಗೆದುಕೊಳ್ಳುವ ಪೊಲೀಸ್ ಅಧಿಕಾರಿಯು




**ಹೊಸವರ್ಷದ ದಿನ ಮಹಿಳೆಯರ ಮೇಲಾದ ಲೈಂಗಿಕ ದೌರ್ಜನ್ಯವನ್ನು ವಿರೋಧಿಸಿ ಪ್ರತಿಭಟನೆ**

ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಬಹುತೇಕ ಮಹಿಳಾ ಕಾರ್ಮಿಕರು ನಿರಂತರವಾಗಿ ತಮ್ಮ ಗಂಡಂದಿರ ಕಣ್ಗಾವಲಿನಲ್ಲಿರುತ್ತಾರೆ, ಜೊತೆಗೆ ಪದೇ ಪದೇ ತಮ್ಮ ಚಾರಿತ್ರ್ಯದ ಬಗ್ಗೆ ಅವರಿಂದ ಅನುಮಾನಿಸ್ಪಡುತ್ತಾರೆ. ತಿಂಗಳು ತಿಂಗಳೂ ನಿರ್ದಿಷ್ಟ ವೇತನ ಸಿಗುವ, ಕುಟುಂಬಕ್ಕೆಲ್ಲ ಅನ್ವಯಿಸುವ ಇ.ಎಸ್.ಐ, ಪಿಎಫ್. ನಂತಹ ಸಾಮಾಜಿಕ ಸುರಕ್ಷೆಯಿರುವ ಉದ್ಯೋಗದಲ್ಲಿ ಬದ್ಧತೆಯಿಂದ ದಿನವೆಲ್ಲ ಶಿಸ್ತಿನಿಂದ ದುಡಿಯುವುದನ್ನು ಸಹಿಸುವ ಗುಣ ಬಹುಶಃ ಆ ಗಂಡಂದಿರಿಗೆ ಇಲ್ಲದಿರಬಹುದು. ಆದರೆ ಅವಳಿಗೆ ಅವಳದೇ ಆದ ಅಸ್ತಿತ್ವವಿದೆ. ದಿನ ಪೂರ್ತಿ ಅವಳು ಅನುಭವಿಸುವ ಒತ್ತಡ, ಅವಳಿಗೆ ಮಾತ್ರವೇ ಗೊತ್ತು. ಕಾರ್ಖಾನೆಯಲ್ಲಿ ಶೌಚಕ್ಕೆ ಹೋಗಲೂ, ಸಾವಧಾನವಾಗಿ ಊಟ ಮಾಡಲೂ ಅನುಮಾನಿಸಿ, ತನ್ನ ಪ್ರೊಡಕ್ಷನ್ ಮುಗಿಸಲು ಹೆಣಗಾಡುತ್ತಾ, ಪುನಃ ಮನೆಗೆ ಬಂದು ಮನೆಗೆಲಸ ಮುಗಿಸುವ ಮಹಿಳೆಯರು ಅತೀವ ಒತ್ತಡದಲ್ಲಿಯೇ ದಿನ ಕಳೆಯುತ್ತಾರೆ. ಕೆಲವು ಮಹಿಳಾ ಕಾರ್ಮಿಕರ ದಿನವು ಗಂಡನ ದೌರ್ಜನ್ಯವನ್ನೂ ಎದುರಿಸುವುದರೊಂದಿಗೆ ಮುಗಿಯುತ್ತದೆ. ಹೀಗೆ ಮನೆಯಲ್ಲಿ ಒಂದು ರೀತಿಯ ದೌರ್ಜನ್ಯ ಎದುರಿಸುತ್ತಿರುವ ಮಹಿಳೆಯರು ಮನೆಯಿಂದ ಹೊರಗೆ ಸಮಾಜ ಮತ್ತು ವ್ಯವಸ್ಥೆಯಿಂದಲೂ

ಮಹಿಳೆಯರಿಗೆ ಅವರದೇ ರೀತಿಯಲ್ಲಿ ತಿಳಿ ಹೇಳುತ್ತಾರೆ "ನಿನ್ನ ಸಂಸಾರ ಹಾಳು ಮಾಡುವ ಜನರಿರುತ್ತಾರೆ, ಎಚ್ಚರವಿರಲಿ, ನೀನು ಗಂಡನನ್ನು ಬಿಟ್ಟು ಒಬ್ಬೊಂಟಿಯಾಗಿ ಬೆಂಗಳೂರಿನಂತ ಪೇಟೆಯಲ್ಲಿ ಬದುಕಲು ಸಾಧ್ಯವೇ? ಯೋಚಿಸು ಕಷ್ಟವೋ ಸುಖವೋ ಅನುಸರಿಸಿ ಕೊಂಡು ಹೋಗು" ಎನ್ನುತ್ತಾರೆ, ಯಾವುದೇ ಕೌಟುಂಬಿಕ ದೌರ್ಜನ್ಯಕ್ಕೆ ಪೊಲೀಸ್ ಕೇಳುವ ಮಹಿಳೆಯರಿಗೆಲ್ಲ ಇದೇ ಉಪದೇಶ ಹೇಳಿ, ಪುರುಷ ಪ್ರಧಾನ ಸಮಾಜದ ವಕ್ತಾರರಂತೆ ವರ್ತಿಸುತ್ತಾರೆ. ದೌರ್ಜನ್ಯದ ಅಡಿಯಲ್ಲಿ ಎಫ್.ಐ.ಆರ್ ಹಾಕುವ ಕೇಸ್‌ಗಳು ತುಂಬಾ ಕಡಿಮೆ. ಕೆಲವು ಪೊಲೀಸ್ ಅಧಿಕಾರಿಗಳು ಮಹಿಳೆಯರ ದೂರಿಗೆ ಸ್ಪಂದಿಸಿ ದೂರು ದಾಖಲಿಸಿ ಕೊಂಡರೂ ಸಹ ಅವರ ಕ್ರಮವು ಗಂಡನನ್ನು 'ಹೆದರಿಸುವ' ಹಂತಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಸಂಘಟನೆಗೆ ದಿನನಿತ್ಯ ಮಹಿಳೆಯರ ಮೇಲಿನ ದೌರ್ಜನ್ಯಗಳ ಕೇಸ್‌ಗಳು ಬರುತ್ತಿದ್ದರೂ, ಸಹ ಕೆಲವೊಂದು ಘಟನೆಗಳು ಮಾತ್ರ ಸಮಾಜದಲ್ಲಿ ಅತ್ಯಂತ ಮಹತ್ವ ಪಡೆದುಕೊಳ್ಳುತ್ತದೆ.ಹೊಸವರ್ಷದ ದಿನ ನಡೆದ ಸಾಮೂಹಿಕ ಲೈಂಗಿಕ ದೌರ್ಜನ್ಯವಿರಬಹುದು, ಕಮ್ಮನಹಳ್ಳಿಯಲ್ಲಿ ಯುವತಿಯ ಮೇಲೆ ನಡೆದ

ದೌರ್ಜನ್ಯವಿರಬಹುದು, ಇಂತಹ ಘಟನೆಗಳು, ಮಹಿಳೆಯರ ಬಗೆಗೆ ಇರುವ ಸಮಾಜದ ದೃಷ್ಟಿಕೋನವನ್ನು ಬಿಂಬಿಸುತ್ತದೆ.ಈ ರೀತಿಯ ಘಟನೆಗಳಿಗೆ ಕಾರಣ ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರ ಮೇಲೆ ತನ್ನ ಹಿಡಿತ ಸಾಧಿಸಲು ಅಥವಾ ಲಿಂಗ ಸಮರ್ಥನೆ ಮಾಡಿಕೊಳ್ಳಲು ಎಂದು ಹೇಳಬಹುದೇ?

ಆದರೆ ಪುರುಷ ಪ್ರಧಾನ ಸಮಾಜವು 'ಮಹಿಳೆಯರ ವಿದೇಶಿ ಸಂಸ್ಕೃತಿಯ ಅನುಸರಣೆ, ಅರೆಬರೆ ಉಡುಗೆ, ಹೊರಗೆ ಹೋಗಿದ್ದ ಸಮಯ' ಇವೆಲ್ಲವನ್ನೂ ಮುಂದುಮಾಡಿ ತನ್ನ ದುಷ್ಕೃತ್ಯಗಳನ್ನು ಸಮರ್ಥಿಸಿ ಕೊಳ್ಳುತ್ತಿದೆ. ಆ ಮೂಲಕ ಮಹಿಳೆಯು ಎಲ್ಲೆಂದರಲ್ಲಿ, ಎಷ್ಟು ಹೊತ್ತಿಗಾದರೂ ಓಡಾಡದಂತೆ, ತನ್ನಿಷ್ಟದ ಉಡುಪು ತೊಡದಂತೆ ನಿರ್ಬಂಧ ಹೇರಿ, ಒಂದು ವೇಳೆ ಅದನ್ನು ಮೀರಿದರೆ ನಿಮ್ಮನ್ನು ಲೈಂಗಿಕ ದೌರ್ಜನ್ಯ ದಿಂದಲೇ ಹತ್ತಿಕ್ಕುತ್ತೇವೆ ಎಂದು ಕೆಲವು ಸಮಾಜ ಘಾತುಕ ಶಕ್ತಿಗಳು ಎಂದು ಮಾಡಿ ತೋರಿಸುತ್ತಿದೆ. ದುರಾದೃಷ್ಟವೆಂದರೆ, ಅದನ್ನು ಪುರುಷ ಪ್ರಧಾನ ಹಿತಾಸಕ್ತಿಯನ್ನು ಕಾಯುವ ವ್ಯವಸ್ಥೆಯೂ ಬೆಂಬಲಿಸುತ್ತದೆ.

ವಿಶ್ವದ ಅತೀ ಬಲಿಷ್ಠ ಸೇನಾ ಬಲವಿರುವ ಅಮೆರಿಕದ 45ನೇ ಅಧ್ಯಕ್ಷರಾಗಿ ಇತ್ತೀಚಿಗೆ ಡೋನಾಲ್ಡ್‌ಟ್ರಂಪ್ ಅಧಿಕಾರಕ್ಕೆ ಬಂದಿದ್ದಾರೆ. ಮುಸ್ಲಿಮ್ ವಿರೋಧಿ, ವಲಸಿಗರ ವಿರೋಧಿಯಾದ ಟ್ರಂಪ್ ಮಹಿಳಾ ವಿರೋಧಿಯೂ ಹೌದು ಎನ್ನುವುದಕ್ಕೆ, ಅಧಿಕಾರಕ್ಕೆ ಬಂದ ಮರುದಿನವೇ ಅವರ ವಿರುದ್ಧ ಅಮೆರಿಕಾವೂ ಸೇರಿದಂತೆ ವಿಶ್ವದಾದ್ಯಂತ ಮಹಿಳಾ ಸಂಘಟನೆಗಳು, ಮಹಿಳಾಪರ ಮನಸ್ಸುಗಳು ನಡೆಸಿದ ಬೃಹತ್ ಪ್ರತಿಭಟನೆಗಳೇ ಸಾಕ್ಷಿ. ಪ್ರತಿ ಸಣ್ಣ ಮತ್ತು ದೊಡ್ಡ ಹಂತದ ಯಾವುದೇ ಕ್ಷೇತ್ರದಲ್ಲಾಗಲೀ ಮಹಿಳೆಗೆ ಮಾತ್ರವಲ್ಲ ದಬ್ಬಾಳಿಕೆಗೆ ಒಳಗಾಗಿರುವ ಯಾವುದೇ ಜನಾಂಗ, ಜಾತಿ, ವರ್ಗ, ಧರ್ಮ, ಬುಡಕಟ್ಟು ಎಲ್ಲರಿಗೂ ಸುರಕ್ಷತೆ ಗೌರವ ಮತ್ತು ಘನತೆ ಸಿಗಬೇಕು ಎಂಬ ಆಶಯದೊಂದಿಗೆ ಹಲವಾರು ಪ್ರತಿಭಟನೆಗಳು ನಡೆಯುತ್ತಿದೆ ಮತ್ತು ನಡೆಯಲೇಬೇಕು.

ಅಂದಿನಿಂದಲೂ ಸಮಾಜ ಮಹಿಳೆಯರ ಬಗ್ಗೆ ಕೀಳಾದ ನಿಕೃಷ್ಟ ಭಾವನೆಯನ್ನೇ ಹೊಂದಿದೆ. ಸಮಾಜದ ಬದಲಾವಣೆಗೆ ನಿಂತಿರುವ ಮಹಿಳಾ ಸಂಘಟನೆಗಳು ಮಹಿಳೆಯರಿಗಾಗಿ ಯಾವ ರೀತಿ ಭಿನ್ನವಾದ ಆಂಶಗಳಿಂದ ಮಹಿಳಾ ಸಬಲೀಕರಣಕ್ಕೆ ತನ್ನ ಕೊಡುಗೆ ನೀಡಬಹುದು ಎಂದು ಯೋಚಿಸಬೇಕು.

ಕಮ್ಮನಹಳ್ಳಿ, ಬಾಣಸವಾಡಿ ಮತ್ತು ತುಮಕೂರಿನಲ್ಲಿ ನಡೆದಿರು ವಂತೆಯೇ ಲೈಂಗಿಕ ದೌರ್ಜನ್ಯ ಸಮಸ್ಯೆಯನ್ನು ಗಾರ್ಮೆಂಟ್ಸ್‌ನಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಪ್ರತಿದಿನ ಅನುಭವಿಸುತ್ತಿದ್ದಾರೆ. ಹೊಸ ವರ್ಷಾಚರಣೆ ಸಮಯದಲ್ಲಿ ನಡೆದ ಅತ್ಯಾಚಾರದಂತಹ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಅನೇಕ ಸಂಘಟನೆಗಳು ಎಂ.ಜಿ.ರೋಡ್‌ನಲ್ಲಿ ಪ್ರತಿಭಟನೆ ನಡೆಸಿದೆವು. ನಮ್ಮೊಂದಿಗೆ ಅನೇಕ ಮಹಿಳಾ ಗುಂಪುಗಳು, ಬೆಂಗಳೂರಿನ ನಾಗರೀಕರು ಮತ್ತು ಮಹಿಳಾಪರ ಚಿಂತನಕಾರರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಮಹಿಳಾಪರ ಘೋಷಣೆಗಳು, ಪುರುಷ ಪ್ರಧಾನ ವ್ಯವಸ್ಥೆ ಮತ್ತು ಸರ್ಕಾರಿ ನೀತಿಗಳ ವಿರುದ್ಧ ಘೋಷಣೆಗಳು, ರ‍್ಯಾಲಿಯ ಮೂಲಕ ಸಾರ್ವಜನಿಕ ಸ್ಥಳದಲ್ಲಿ ಸಭೆ ನಡೆಸಿ ಹಾಡು-ಕುಣಿತಗಳ ಮೂಲಕ ಮಹಿಳಾಪರ ಜಾಗೃತಿ ಮೂಡಿಸಿದರು. ಏನೇ ಇರಲಿ ಇವೆಲ್ಲವೂ ಹಳೆಯ ಮೌಢ್ಯಗಳಿಗೆ ಅಂಟಿಕೊಂಡಿರುವ ಮಹಿಳಾ ವಿರೋಧಿ ವ್ಯವಸ್ಥೆಯನ್ನು ಎಷ್ಟು ಮಾತ್ರ ಬದಲಾಯಿಸಬಲ್ಲದು ಎಂದು ತಿಳಿಯದು. ಮಹಿಳೆಯನ್ನು ರಾತ್ರಿಯ ಹೊತ್ತಿನಲ್ಲಿ ನೋಡಿದರೆ ಸಾಕು ದೌರ್ಜನ್ಯ ಎಸಗಬೇಕೆಂಬ ಮನೋಭಾವವನ್ನು ಗುರುತಿಸುವುದು ತಾನೇ ಹೇಗೆ? ಮತ್ತು ಈ ಮನೋಭಾವವನ್ನು ಬದಲಾಯಿಸಲು ಕೈಗೊಳ್ಳಬೇಕಾದ ಕ್ರಮ ಯಾವ ರೀತಿ ಇರಬೇಕು?

ಇದಕ್ಕೆಲ್ಲಾ ಒಂದೇ ದಾರಿ ಎನಿಸುತ್ತಿದೆ. ಕುಟುಂಬದಿಂದಲೇ ಗಂಡು ಹೆಣ್ಣಿನ ಸಮಾನತೆ ಬಗ್ಗೆ ಶಿಕ್ಷಣ ಆರಂಭವಾಗಬೇಕು. ಕುಟುಂಬದಲ್ಲಿ ಮಕ್ಕಳನ್ನು ತಿದ್ದಲು, ಬೆಳೆಸಲು ಮಹಿಳೆಯರಿಗೆ ಅವಕಾಶವಿರುವುದರಿಂದ ಪ್ರತಿಯೊಬ್ಬ ಮಹಿಳೆಯು ಇದನ್ನು ತನ್ನ ಜವಾಬ್ದಾರಿ ಎಂದು ತಿಳಿಯ ಬೇಕು ಮತ್ತು ತಮ್ಮ ಮಕ್ಕಳನ್ನು ಸಮಾಜದ ಉತ್ತಮ ಪ್ರಜೆಯನ್ನಾಗಿ ಮಾಡುವ ನಿರ್ಣಯ ಕೈಗೊಳ್ಳಬೇಕಾಗಿದೆ. ಈವರೆಗೆ ಬದಲಾಗದ ಮನೆಗೆಲಸದ ಜವಾಬ್ದಾರಿಯನ್ನು ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ಸಮವಾಗಿ ಹಂಚಿಕೆ ಮಾಡುವ ಮೂಲಕ ಸಮಾಜದಲ್ಲಿ ಮುಂದಿನ ಪೀಳಿಗೆಯಲ್ಲಿ ಬದಲಾವಣೆ ತರಬಹುದು. ಈ ರೀತಿಯ ಬದಲಾವಣೆ ಯಿಂದ ಕುಟುಂಬ ಜವಾಬ್ದಾರಿಯು ಗಂಡ-ಹೆಂಡತಿ ಇಬ್ಬರದ್ದೂ ಎಂಬ ತಿಳುವಳಿಕೆ ಮುಂದಿನ ಪೀಳಿಗೆಯಲ್ಲಿ ಬರುತ್ತದೆ. ಕೌಟುಂಬಿಕ ಹೊಣೆ ಎಂಬುದು ಗಂಡು-ಹೆಣ್ಣು ಇಬ್ಬರಲ್ಲೂ ಹಂಚಿಕೆಯಾದಾಗ ಲಿಂಗ ಸಮಾನತೆಯ ಸಮಾಜವು ನಿರ್ಮಾಣವಾಗುತ್ತದೆ. ಹೆಣ್ಣು ಗಂಡಿಗೆ ಸಮ ಎಂಬ ಮನೋಭಾವವನ್ನು ಮತ್ತು ಪರಸ್ಪರ ಗೌರವ ಕೊಡಬೇಕು ಎಂದು ಹೇಳಿಕೊಡುವುದರೊಂದಿಗೆ, ಪುರುಷ ಪ್ರಾಬಲ್ಯ ಮತ್ತು ಸ್ತ್ರೀಯ ಪ್ರಾತಿನಿಧ್ಯದ ಬಗ್ಗೆ, ಲಿಂಗ ಸಮಾನತೆಯ ಬಗ್ಗೆ, ಹಕ್ಕು ಮತ್ತು ಜವಾಬ್ದಾರಿಗಳ ಬಗ್ಗೆ ತಿಳುವಳಿಕೆಗಳನ್ನು ಚಿಕ್ಕಂದಿನಿಂದಲೇ ಮಕ್ಕಳಿಗೆ ಹೇಳಿಕೊಟ್ಟರೆ, ಖಂಡಿತ ಮುಂದಿನ ಪೀಳಿಗೆಯಲ್ಲಿ ಹೆಣ್ಣನ್ನು ನೋಡುವ ದೃಷ್ಟಿಕೋನ ಬದಲಾಗುತ್ತದೆ.

ನೈಜೀರಿಯನ್ ಬರಹಗಾರ್ತಿ ಚಿಮ್ಮಾಮಂಡನಗೋಜಿ ಅಡಿಚಿಯವರು ಹೆಣ್ಣೆಂದರೆ ಯಾರು ಎಂದು ಗುರುತಿಸುವುದಕ್ಕಿಂತ ಹೆಣ್ಣು ಹೇಗಿರಬೇಕು ಎಂದು ವಿವರಿಸುವುದೇ "ಲಿಂಗತ್ವ"ದ ಕಲ್ಪನೆಯಲ್ಲಿರುವ ದೊಡ್ಡ ಸಮಸ್ಯೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಮಹಿಳೆಯರ ಮಹತ್ವದ ತಿಳುವಳಿಕೆಗೆ ಮಾತ್ರವಲ್ಲ, ಗಂಡಸು ಎಂಬುವವನು ಹೆಣ್ಣಿನೊಂದಿಗೆ ಎಷ್ಟು ಪೂರಕ ಮತ್ತು ಇಲ್ಲದಿದ್ದರೆ ಮಾರಕ ಎಂಬುದನ್ನು ತಿಳಿಸುತ್ತದೆ.

ಹೆಣ್ಣು-ಗಂಡು ನಾವುಗಳು ಸ್ವಾತಂತ್ರ್ಯದ ಮತ್ತು ಸಮಾನತೆಯ ಸಂಘಟನೆಯನ್ನು ಸಮಮನಸ್ಕರಾಗಿ ಕಟ್ಟೋಣ ಎಂದು ಏಂಜೆಲಾ ಡೇವಿಸ್‌ರವರು ಹೇಳಿದ್ದಾರೆ.

■ ಅಂಜಲಿ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ

**ಗಾರ್ಮೆಂಟ್ಸ್ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ಸಿಗುತ್ತದೆಯೇ, ಅವರು ಅದನ್ನು ಪಡೆಯಲು ಅರ್ಹರೇ? ಈ ಪ್ರಶ್ನೆ ಎಲ್ಲಾ ಕಾರ್ಮಿಕರಲ್ಲೂ ಇದೆ. ಬಿಪಿಎಲ್ ಕಾರ್ಡ್ ಪಡೆಯಲು ಬೇಕಾದ ಅರ್ಹತೆಗಳನ್ನು ಕುರಿತು ಇಲ್ಲಿ ಅಧಿಕೃತ ಮಾಹಿತಿಗಳನ್ನು ನೀಡಲಾಗಿದೆ.**

* ಆದಾಯ ತೆರಿಗೆ / ವ್ಯಾಟ್ ಮುಂತಾದ ತೆರಿಗೆ ಪಾವತಿಸದ ಪ್ರತಿಯೊಂದು ಕುಟುಂಬವು ಬಿಪಿಎಲ್ ಕಾರ್ಡ್ ಪಡೆಯಲು ಅರ್ಹವಾಗಿದೆ.
* ಸರ್ಕಾರಿ ಹುದ್ದೆಯಲ್ಲಿ ಇಲ್ಲದ ಪ್ರತಿ ಕುಟುಂಬವುಬಿಪಿಎಲ್ ಕಾರ್ಡ್ ಪಡೆಯಬಹುದು
* ಗ್ರಾಮೀಣ ಪ್ರದೇಶದಲ್ಲಿ 7.5 ಎಕ್ಕರೆಗಿಂತ ಕಡಿಮೆ ಒಣ ಭೂಮಿ ಇರುವ ಮತ್ತು 1000 ಸಾವಿರ ಚದರ ಅಡಿಗಿಂತ ಕಡಿಮೆ ವಿಸ್ತೀರ್ಣದ ಮನೆ ಹೊಂದಿರುವ ಕುಟುಂಬಗಳು ಬಿಪಿಎಲ್ ಕಾರ್ಡ್‌ಪಡೆಯಬಹುದು.
* ಕೃಷಿ ಉಪಯೋಗಿ ವಾಹನಗಳನ್ನು ಹೊರತು ಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿಲ್ಲದ ಕುಟುಂಬಗಳು ಬಿಪಿಎಲ್ ಕಾರ್ಡ್‌ಪಡೆಯಲು ಅರ್ಹರಾಗಿರುತ್ತಾರೆ.
* 150 ಯುನಿಟ್‌ಗಿಂತ ಕಡಿಮೆ ವಿದ್ಯುತ್‌ನ್ನು ಬಳಸುವ ಕುಟುಂಬಗಳು ಬಿಪಿಎಲ್ ಕಾರ್ಡ್‌ಪಡೆಯಲು ಅರ್ಹರಾಗಿತ್ತಾರೆ.



Scanned with OKEN Scanner

# ಸುದ್ದಿ ಚಿತ್ರ



ಸಾಮಾಜಿಕ ಭದ್ರತೆಯ ಬಗ್ಗೆ ನಾಯಂಡಹಳ್ಳಿಯಲ್ಲಿ ತರಬೇತಿ



ಗಾರ್ಮೆಂಟ್ಸ್ ಕಾರ್ಖಾನೆಯ ಸೂಪರ್‌ವೈಸರ್‌ಗಳಿಗೆ ತರಬೇತಿ ಕಾರ್ಯಕ್ರಮ 8-1-2017



ವಿಮೋಚನಾದ "ಮರ್ಮರ" ಕಾರ್ಯಕ್ರಮದಲ್ಲಿ ಗಾರ್ಮೆಂಟ್ಸ್ ಮಹಿಳೆಯರು



ತರಬೇತಿ ಕಾರ್ಯಕ್ರಮವೊಂದರಲ್ಲಿ



ಮಹಿಳಾ ಕಾರ್ಮಿಕರೊಂದಿಗೆ ಸಂವಾದ



ಶ್ರೀರಂಗಪಟ್ಟಣದ ಕಾರ್ಯಕ್ರಮವೊಂದರಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು





ಸಂಘಟನೆಗೆ ಭೇಟಿಕೊಟ್ಟ ವಿದ್ಯಾರ್ಥಿ, ವಿದ್ಯಾರ್ಥಿನಿಯರೊಂದಿಗೆ ನಾವು

# ರಾಯಚೂರಿನ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ (ಗ್ರಾಕೂಸ್) ಯೊಂದಿಗೆ ನಾವು





ದಿನಾಂಕ : 16.02,2017 ಮತ್ತು 17.02.2017 ರಂದು ಎರಡು ದಿನ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಕಾರ್ಯಕರ್ತರುಗಳು ರಾಯಚೂರಿನಲ್ಲಿ ಇರುವ ನವಜೀವನ ಮಹಿಳಾ ಒಕ್ಕೂಟ ಮತ್ತು ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಗೆ ಸಂಘಟನೆ ಬೆಳೆಸುವ ಬಗ್ಗೆ ಮತ್ತು ಅನುಸರಿಸುವ ಕಾರ್ಯತಂತ್ರಗಳನ್ನು ತಿಳಿದುಕೊಳ್ಳಲು ಹೋಗಿದ್ದೆವು. ನವಜೀವನ ಮಹಿಳಾ ಒಕ್ಕೂಟದ ಸಂಘಟನೆಯು. ದೇವದಾಸಿ ಪದ್ಧತಿ. ಬಾಲ್ಯವಿವಾಹದಂತಹ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನೆ ಮಾಡುವುದಕ್ಕಾಗಿ ಮಹಿಳೆಯರನ್ನು ಒಗ್ಗೂಡಿಸಿದೆ. ಸ್ವ ಸಹಾಯ ಸಂಘಗಳ ಮೂಲಕ ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಬೆಳೆಸಿದೆ. ಸರ್ಕಾರಿ ಯೋಜನೆಗಳು. ಮಕ್ಕಳ ಶಿಕ್ಷಣ ಈ ಎಲ್ಲದರ ಬಗ್ಗೆ ಈ ಸಂಘಟನೆ ಕೆಲಸ ಮಾಡುತ್ತಿದೆ.

ಕಡದಿನ್ನಿ ಎಂಬ ಹಳ್ಳಿಗೆ ನಾವು ಬೇಟಿ ನೀಡಿದಾಗ ಕಾರ್ಯಕರ್ತರು ಮತ್ತು ಕಾರ್ಮಿಕ ಮಹಿಳೆಯರ ಮಧ್ಯೆ ಉತ್ತಮ ಬಾಂಧವ್ಯ ಇದ್ದುದು ತಿಳಿಯಿತು.

ಮತ್ತೊಂದು ಗಮನ ಸೆಳೆದ ಅಂಶವೆಂದರೆ ಸಂಘಟನೆಯ ಸದಸ್ಯರು 'ನಮ್ಮ ಗ್ರಾಮ' ಎಂಬ ಪರಿಕಲ್ಪನೆಯಿಂದ ಪ್ರತಿಯೊಬ್ಬರೂ ಒಂದು ದಿನದ ಶ್ರಮದಾನ ಮಾಡುವ ಮತ್ತು ತಂದಿರುವ ಬುತ್ತಿಯನ್ನು ಎಲ್ಲರೂ ಹಂಚಿಕೊಂಡು ತಿನ್ನುವ ಮೂಲಕ ಸಮಾನತೆಯನ್ನು ಸಾರಿದ್ದಾರೆ.ಈ ರೀತಿ ಎರಡು ಸಂಘಟನೆಗಳ ಕಾರ್ಯಕರ್ತರು ಮತ್ತು ಸದಸ್ಯರುಗಳನ್ನು ಭೇಟಿ ಮಾಡಿ ಅವರ ಸವಾಲುಗಳು. ಕಾರ್ಯತಂತ್ರಗಳು ಮತ್ತು ಸಾಧನೆಗಳ ಬಗ್ಗೆ ತಿಳಿದು ನಮ್ಮಲ್ಲಿ ಹೊಸ ಚೇತನ ತುಂಬಿದಂತಾಯಿತು.ನಮ್ಮ ಸಂಘಟನೆಗಳ ಬಗ್ಗೆ ಅವರಿಗೆ ತಿಳಿಸಿಕೊಟ್ಟೆವು.ರಾಯಚೂರಿನಿಂದ ಅನೇಕ ಜನರು ಬೆಂಗಳೂರಿನ ಗಾರ್ಮೆಂಟ್ಸ್‌ಗಳಲ್ಲಿ ಮತ್ತಿತರ ಕಡೆಗಳಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ನಮ್ಮಲ್ಲಿ ಹಂಚಿಕೊಂಡರು. ❐

## ——— ಕಾರ್ಮಿಕರಲ್ಲಿ ಮನವಿ ———

ಆತ್ಮೀಯರೇ. ಇದು ನಿಮ್ಮ ಪತ್ರಿಕೆ ನೀವು ಹಣ ನೀಡಿ ಕೊಂಡು ಓದಿದರೇ ಈ ಪತ್ರಿಕೆ ಮುಂದುವರೆಯಲು ಸಾಧ್ಯವಾಗುತ್ತದೆ. ಕಾರ್ಮಿಕರಿಗಾಗಿ ಇರುವ ಪತ್ರಿಕೆಯನ್ನು ಕಾರ್ಮಿಕರೇ ಉಳಿಸಬೇಕು. ಆದ್ದರಿಂದ ದಯವಿಟ್ಟು ದುಡ್ಡುಕೊಟ್ಟು ಖರೀದಿಸಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.

## ಕಾರ್ಮಿಕರ ಅನುಭವ

ನನ್ನ ಹೆಸರು ಶೋಭ. ನಾನು ಮೈಸೂರು ರಸ್ತೆಯಲ್ಲಿರುವ ಎಚ್ ಪಿ ಎಫ್ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಐರನರ್ ಆಗಿ ಎರಡು ವರ್ಷಗಳ ಕಾಲ ಖಾಯಂ ಆಗಿ ಕೆಲಸ ಮಾಡುತಿದ್ದನು ದಿನ ಪ್ರೊಡಕ್ಷನ್ ಟಾರ್ಚರ್ ಆಗುತಿತ್ತು. 2009ರಲ್ಲಿ ಒಂದು ದಿನ ಸೂಪರ್ ವೈಸರ್ ಸರಿಯಾಗಿ ಪ್ರೋಡಕ್ಷನ್ ಮಾಡುವುದಾದರೆ ಕೆಲಸಕ್ಕೆ ಬಾ ಇಲ್ಲದಿದ್ದರೆ ಯಾಕೆ ನೀವೆಲ್ಲಾ ಬಂದು ಸಾಯ್ತಿರಾ ಅಂತ ಬಾಯಿಗೆ ಬಂದ ಬೈಗುಳ ಬೈದು ಆಡಳಿತ ವರ್ಗದವರೆಲ್ಲ ಸೇರಿ ನನ್ನನ್ನು ಹೊರ ಹಾಕಿದರು. ನಾನು ಏನು ಮಾಡುವುದು ಎಂದು ತೋಚದೆ ಇರುವ ಸಮಯದಲ್ಲಿ ನನ್ನ ನೆನಪಿಗೆ ಬಂದಿದ್ದು ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್. ಸಂಘಟನೆಯ ಕಾರ್ಯಕರ್ತರು ನಮ್ಮ ಕಂಪನಿಯ ಹತ್ತಿರ ಕಾರ್ಮಿಕರನ್ನು ಮಾತನಾಡಿಸಲು ಬರುತಿದ್ದರು. ಅವರ ಜೊತೆ ನನ್ನ ಸಮಸ್ಯೆಯನ್ನು ಹೇಳಿಕೊಂಡೆನು. ನಂತರ ಲೇಬರ್ ಕೋರ್ಟ್‌ನಲ್ಲಿ ನನ್ನ ಪರವಾಗಿ ಕೇಸು ಹಾಕಲಾಯಿತು. ಸತತವಾಗಿ ನಾಲ್ಕು ವರ್ಷಗಳ ಕಾಲ ಕೇಸು ಮುಂದುವರಿಯಿತು. ಗಾರ್ಮೆಂಟ್ಸ್ ಅಂಡ್ ಟೆಕ್ಸ್ ಟೈಲ್ಸ್ ವರ್ಕರ್ಸ್ ಯುನಿಯನ್ (GATWU) ನನ್ನ ಪರವಾಗಿ ನಿಂತ ಕಾರಣ ಕೇಸು ನನ್ನಂತೆಯೇ ಆಯಿತು. ನನಗೆ ನಾಲ್ಕು ವರ್ಷದ ಸಂಬಳ ಮತ್ತು ಕಂಪನಿಯಲ್ಲಿ ಅದೇ ಕೆಲಸದಲ್ಲಿ ಮುಂದುವರಿಯಲು ಸಾಧ್ಯವಾಯಿತು. ಮತ್ತು ಅಲ್ಲಿಯವರೆಗಿನ ನನ್ನ ಬಾಕಿ ವೇತನ 2 ಲಕ್ಷ ರೂ. ನನಗೆ ದೊರಕಿತು. ಇದೇ ರೀತಿ ಬೇರೆ ಬೇರೆ ಗಾರ್ಮೆಂಟ್ಸ್ ಕಂಪನಿಯಲ್ಲಿ ದುಡಿಯುವಂತಹ ಕಾರ್ಮಿಕರು GATWUವಿನ ಸದಸ್ಯತ್ವ ಪಡೆದು ತಮ್ಮ ಕಂಪನಿಗಳಲ್ಲಿ ಆಗುವಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ. ನ್ಯಾಯ ನಮ್ಮೊಂದಿಗಿದ್ದರೆ ಜಯ ಯಾವಾಗಲೂ ನಮಗೆ ಕೇವಲ ಕಾರ್ಮಿಕ ಸಂಘಟನೆಯಿಂದ ಮಾತ್ರವೇ ಕಾರ್ಮಿಕರ ಹಿತಾಸಕ್ತಿ ಕಾಪಡಲು ಸಾಧ್ಯ.

■ ಶೋಭ ಎಚ್. ಪಿ. ಎಫ್.



Scanned with OKEN Scanner




**ರಕ್ತ ವೃದ್ಧಿಸುವ ಅರಿಶಿನ:** ಅರಿಶನದಲ್ಲಿ ಕಬ್ಬಿಣದಂಶ ಸಾಕಷ್ಟಿದೆ. ಒಂದು ಚಮಚ ಅರಿಶಿನ ಪುಡಿಯೊಂದಿಗೆ ಒಂದು ಚಮಚ ಜೇನು ಬೆರೆಸಿ ಸೇವಿಸುವುದರಿಂದ ಹಿಮೊಗ್ಲೋಬನ್ ಹೆಚ್ಚುತ್ತದಲ್ಲದೇ ದೇಹದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸುತ್ತದೆ. ಅರಿಶಿನ, ನೆಲ್ಲಿಕಾಯಿ ಪುಡಿ, ಕಾಳು ಮೆಣಸಿನ ಪುಡಿಯನ್ನು ಹಾಲಿನಲ್ಲಿ ಹಾಕಿಕೊಂಡು ಬೆಲ್ಲ ಬೆರೆಸಿ ಕುಡಿಯುವುದರಿಂದಲೂ ಹಿಮೊಗ್ಲೋಬಿನ್ ಅಂಶ ಹೆಚ್ಚುತ್ತದೆ.

**ದಂತ ರೋಗಗಳು:** ಅರಿಶಿನವನ್ನು ಸುಟ್ಟು ನಂತರ ಬರುವ ಪುಡಿಯಿಂದ ಹಲ್ಲುಜ್ಜಿದಲ್ಲಿ ಹುಳುಕು ಹಲ್ಲು ಮತ್ತು ಇತರ ಹಲ್ಲಿನ ತೊಂದರೆಗಳು ಮರೆಯಾಗುತ್ತವೆ.

*ಲೇ : ವಸುಂಧರಾ ಭೂಪತಿ (ಸಂಗ್ರಹ : ಆರೋಗ್ಯ ಭಾಗ್ಯ)*

## ಕಾರ್ಮಿಕರ ಭವಿಷ್ಯ ನಿಧಿ ಯೋಜನೆ (1952)

ಎಲ್ಲಾ ವರ್ಗದ ಕಾರ್ಮಿಕರೂ, ಅಂದರೆ ಖಾಯಂ/ಅರೆಕಾಲಿಕ/ದಿನಗೂಲಿ ಕಾರ್ಮಿಕರು ಅಲ್ಲದೆ ಗುತ್ತಿಗೆದಾರರ ಮೂಲಕ ಕೆಲಸ ಮಾಡುವ ಕಾರ್ಮಿಕರೂ ಸಹ, ಕೆಲಸಕ್ಕೆ ಸೇರಿದ ಮೊದಲ ದಿನದಿಂದಲೇ ಭವಿಷ್ಯನಿಧಿ ಸದಸ್ಯರಾಗಲು ಅರ್ಹರಾಗುತ್ತಾರೆ.

- ಕಾರ್ಮಿಕರ ಮಾಸಿಕ ವೇತನದ 12% ರಷ್ಟಕ್ಕೆ, ಅಷ್ಟೇ ಮೊತ್ತದ ಹಣವನ್ನು ಮಾಲೀಕರು ಸೇರಿಸಿ ಭವಿಷ್ಯನಿಧಿ ಸಂಸ್ಥೆಗೆ ಪ್ರತಿ ತಿಂಗಳೂ ಪಾವತಿಸಬೇಕು.
- ಪ್ರತಿಯೊಬ್ಬ ಕಾರ್ಮಿಕರಿಗೂ ಒಂದೊಂದು ಖಾತೆ ನಂ. ಕೊಡಲಾಗುತ್ತದೆ.
- ಆ ಖಾತೆಯಲ್ಲಿ ಜಮೆಯಾಗುವ ಹಣಕ್ಕೆ ಭವಿಷ್ಯನಿಧಿ ಸಂಸ್ಥೆಯು ವಾರ್ಷಿಕ ಬಡ್ಡಿಯನ್ನು ನೀಡುತ್ತದೆ.
- ಆರ್ಥಿಕ ವರ್ಷ 2016–2017ಕ್ಕೆ ಬಡ್ಡಿಯ ದರವು 8.60 ಆಗಿದೆ.
- ಕಾರ್ಮಿಕರು ನಿವೃತ್ತಿಯಾದಲ್ಲಿ ಅಥವಾ ಕೆಲಸ ಬಿಟ್ಟ ಸಂದರ್ಭದಲ್ಲಿ ಈ ಭವಿಷ್ಯನಿಧಿ ಹಣವನ್ನು ಸಂಪೂರ್ಣವಾಗಿ ಅವರಿಗೆ ಪಾವತಿಸಲಾಗುವುದು.
- ಕಾರ್ಮಿಕರು ಮರಣ ಹೊಂದಿದ್ದಲ್ಲಿ, ಭವಿಷ್ಯನಿಧಿ ಹಣವನ್ನು ನಾಮನಿರ್ದೇಶಿತರಿಗೆ ನೀಡಲಾಗುತ್ತದೆ. ಆದ್ದರಿಂದ ಕಾರ್ಮಿಕರು ತಮ್ಮ ನಾಮನಿರ್ದೇಶಿತರು ಯಾರು ಎಂದು ತಿಳಿಸುವುದು ಅತ್ಯಂತ ಮುಖ್ಯವಾಗಿ.
- ಕಾರ್ಮಿಕರು ತಮ್ಮ ತುರ್ತುಅಗತ್ಯಗಳಿಗಾಗಿ ಭವಿಷ್ಯನಿಧಿ ಹಣವನ್ನು ಮುಂಗಡವಾಗಿ ಪಡೆದುಕೊಳ್ಳಬಹುದು. ಆ ಹಣವನ್ನು ಮರುಪಾವತಿ ಮಾಡಬೇಕಾಗಿರುವುದಿಲ್ಲ ಯಾವುದೇ ಬಡ್ಡಿಯನ್ನು ಇದರ ಮೇಲೆ ವಿಧಿಸಲಾಗುವುದಿಲ್ಲ.
- ಮೂರು ವರ್ಷ ಸೇವೆ ಪೂರೈಸಿರುವ ಕಾರ್ಮಿಕರು, ತಮ್ಮ ಮಕ್ಕಳ/ಸೋದರ/ಸೋದರಿಯರ ಮದುವೆಗೆ ಅಥವಾ ವಿದ್ಯಾಭ್ಯಾಸಕ್ಕೆ ಭವಿಷ್ಯನಿಧಿ ಹಣವನ್ನು ಮುಂಗಡವನ್ನಾಗಿ ಪಡೆದುಕೊಳ್ಳಬಹುದು. ಇ.ಎಸ್.ಐ ಸೌಲಭ್ಯವಿಲ್ಲದಿರುವ ಕಾರ್ಮಿಕರು ವೈದ್ಯಕೀಯ ಚಿಕಿತ್ಸೆಗಾಗಿಯೂ ಮುಂಗಡ ಕೊಳ್ಳಬಹುದು.
- ಐದು ವರ್ಷಗಳ ಕಾಲ ಸೇವೆ ಪೂರೈಸಿರುವ ಕಾರ್ಮಿಕರು, ನಿವೇಶನ ಖರೀದಿ ಹಾಗೂ ವಾಸದ ಮನೆ ಖರೀದಿ ಅಥವಾ ನಿರ್ಮಾಣಕ್ಕೆ ಭವಿಷ್ಯನಿಧಿ ಹಣದ 75% ರಷ್ಟು ಮುಂಗಡವನ್ನಾಗಿ ಪಡೆದುಕೊಳ್ಳಬಹುದು.
- ಕಾರ್ಮಿಕರು ಒಂದು ಕಾರ್ಖಾನೆಯಿಂದ ಇನ್ನೊಂದು ಕಾರ್ಖಾನೆ ಕೆಲಸವನ್ನು ಬದಲಾಯಿಸುವಾಗ, ಹಿಂದಿನ ಭವಿಷ್ಯನಿಧಿ ಖಾತೆಯನ್ನು, ಹೊಸ ಕಾರ್ಖಾನೆಯ ಭವಿಷ್ಯನಿಧಿ ಖಾತೆಗೆ ವರ್ಗಾಯಿಸಲು ಅವಕಾಶವಿದೆ. ಇದಕ್ಕೆ ಅರ್ಜಿ ನಮೂನೆ 13ರನ್ನು ಸಲ್ಲಿಸಬೇಕು. ❐

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 17/1, ಹೊಸ ಗುಡ್ಡದಹಳ್ಳಿ
   ಬಸ್‌ಸ್ಟಾಪ್ ಹತ್ತಿರ, ಮೈಸೂರು ರಸ್ತೆ,
   ಬೆಂಗಳೂರು – 560 026.
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು–560009
   ದೂ.: 22216485
3. **ವಿಮೋಚನಾ**
   ನಂ, 33/1–9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು–560 038
   ದೂ.: 25492781
4. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ, ಎಚ್. ಸಿದ್ಧಯ್ಯರಸ್ತೆ
   ಬೆಂಗಳೂರು–27

## ನಾಯಂಡಹಳ್ಳಿಯಲ್ಲಿ ಉಚಿತ ಲೈಬ್ರರಿ

**ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಹಾಗೂ ಅವರ ಮಕ್ಕಳಿಗಾಗಿ ಗಾ.ಮ.ಕ. ಮುನ್ನಡೆಯ ನಾಯಂಡಹಳ್ಳಿ ಕಛೇರಿಯಲ್ಲಿ ಲೈಬ್ರರಿ ವ್ಯವಸ್ಥೆ ಇದ್ದು, ಆಸಕ್ತರು ಇದರ ಉಪಯೋಗವನ್ನು ಪಡೆಯಬಹುದು.**
**ಸಮಯ: ಮಂಗಳವಾರದಿಂದ ಶನಿವಾರ: ಸಂಜೆ 4 ರಿಂದ 7ರ ವರೆಗೆ, ಭಾನುವಾರ: ಬೆಳಿಗ್ಗೆ 10ರಿಂದ 2ರ ವರೆಗೆ**

**ಸೂಜಿ–ದಾರ** ಸಂಪಾದಕ ಮಂಡಳಿ

ಗೌರವ ಸಂಪಾದಕರು : **ದು. ಸರಸ್ವತಿ**  ಸಂಪಾದಕರು : **ಪ್ರತಿಭಾ ಆರ್.**

ಸಹಕಾರ : **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಪದಾಧಿಕಾರಿಗಳು**

ಪ್ರಕಾಶಕರು : **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**, ನಂ. 216, ಎರಡನೇ ಮಹಡಿ, ಚೆನ್ನಕೇಶವ ನಿಲಯ, ಗಣೇಶ ದೇವಸ್ಥಾನದ ಹತ್ತಿರ, ಪಂತರಪಾಳ್ಯ ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039. । ಮುದ್ರಣ : **ಇಳಾ ಮುದ್ರಣ**, ಬೆಂಗಳೂರು – 560 026. ದೂ. : 26757159

Scanned with OKEN Scanner